CC 3338/2022 PW2

**ದಿನಾಂಕ 04.09.2023 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

## ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

2. ದಿನಾಂಕ 28.01.2017 ರಂದು ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ಸದರಿ ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ನಿಪಿ–3 ಎಂದು ಗುರುತಿಸಲಾಯಿತು. ಸದರಿ ದೂರು ದೃಢೀಕೃತ ನಕಲಾಗಿದ್ದರಿಂದ ಸಾಕ್ಷಿಯ ಸಹಿಯನ್ನು ನಿಶಾನೆಗೆ ಒಳಪಡಿಸಲಾಗಿಲ್ಲ. ನಿಪಿ–1 ಸ್ಥಳ ಮಹಜರನಲ್ಲಿ ಸಾಕ್ಷಿ ತನ್ನ ಸಹಿ ನೋಡಿದ್ದು ಗುರುತಿಸಿದ್ದು, ಆದರೆ ಸದರಿ ಮಹಜರ ದೃಢೀಕೃತ ನಕಲಾಗಿದ್ದರಿಂದ ಸಾಕ್ಷಿಯ ಸಹಿಯನ್ನು ನಿಶಾನೆಗೆ ಒಳಪಡಿಸಲಾಗಿಲ್ಲ. ನಿಪಿ–1 ಕ್ಕೆ ದಿನಾಂಕ 28.01.2017 ರಂದು ನಾನು ಸ್ಥಳ ತೋರಿಸಿದ ಮೇರೆಗೆ ಪೊಲೀಸರು ಸ್ಥಳದಲ್ಲಿ ಬೆಳಿಗ್ಗೆ 11–30 ರಿಂದ 12–20 ರವರೆಗೆ ಮಹಜರ ಮಾಡಿದ್ದು ಸ್ಥಳದಲ್ಲಿಯೇ ನನ್ನ ಮತ್ತು ಚಾಸಾ–4 ರವರ ಸಹಿ ಪಡೆದಿರುತ್ತಾರೆ. ನ್ಯಾಯಾಲಯದ ಮುಂದೆ ಇರುವ 3 ನೇ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಸದರಿ ಸಮಯದಲ್ಲಿ ಆರೋಪಿ ಪ್ರಕಾಶ ಮತ್ತು ವಿಜಿ ಅಃ ವಿಜಯರವರು ಕೂಡ ಉಪಸ್ಥಿತರಿದ್ದರು. ಅವರನ್ನು ಕೂಡ ನೋಡಿದರೆ ಗುರುತಿಸುತ್ತೇನೆ.

## ಪಾಟೀಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎಸ್.ಎನ್.ಕೆ. ರವರಿಂದ

ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಶಿರಿನ್ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.